# ಚಂದನವನದ ಮಂದಾರ



**ಬಾಲ್ಯದಲ್ಲೇ ರಂಗಭೂಮಿ ಒಡನಾಟದಲ್ಲಿದ್ದ ನಟಿ ಮಂದಾರ ಬಟ್ಟಲಹಳ್ಳಿ, ಭರತನಾಟ್ಯ, ಕೂಚುಪುಡಿ ನೃತ್ಯಕಲಾವಿದೆಯೂ ಹೌದು. ನಟನೆಯೊಂದಿಗೆ ನಿರ್ದೇಶಕಿಯಾಗುವ ಕನಸೂ ಅವರ ಜೊತೆಯಾಗಿದೆ.**

**■ ಸುಮಲತಾ ಎನ್.**

ರಂಗಭೂಮಿಯ ಜೊತೆಜೊತೆಗೆ ಬಾಲ್ಯವನ್ನು ಕಳೆದಿದ್ದ ನಟಿ ಮಂದಾರ ಬಟ್ಟಲಹಳ್ಳಿ, ಹಲವು ರಂಗತಂಡಗಳಲ್ಲಿ ತೊಡಗಿ ತಮ್ಮ ನಟನಾ ಕೌಶಲಕ್ಕೆ ಅಡಿಪಾಯ ಹಾಕಿಕೊಂಡವರು. ಎಂಜಿನಿಯರಿಂಗ್ ಓದಿ ನಟನೆಯತ್ತ ಒಲವು ಬೆಳೆಸಿಕೊಂಡಿರುವ ಅವರು ಕನ್ನಡದ ಐದು ಸಿನಿಮಾಗಳಲ್ಲಿ ನಟಿಸಿದ್ದು, ಈಚೆಗೆ ಆರರ ಮೆಟ್ಟಿಲು ಏರಿದ್ದಾರೆ.

'ಪ್ರಯೋಗಾತ್ಮಕ ಪಾತ್ರಗಳಲ್ಲಿ ತೊಡಗಿಕೊಳ್ಳುವುದು ಎಂದಿಗೂ ನನ್ನ ಆದ್ಯತೆ' ಎನ್ನುವ ಮಂದಾರ, ಚಂದನವನಕ್ಕೆ ಅಡಿಯಿಟ್ಟದ್ದು 'ಓಲ್ಡ್ ಮಾಂಕ್' ಸಿನಿಮಾ ಮೂಲಕ. ಈಚೆಗೆ ಘೋಷಣೆಯಾದ 'ಸಮುದ್ರ ಮಂಥನ' ಸಿನಿಮಾದಲ್ಲಿ ನಟಿಸುತ್ತಿದ್ದು, ಅದಕ್ಕೆ ಸಾಕಷ್ಟು ಸಿದ್ಧತೆಯನ್ನೂ ನಡೆಸಿದ್ದಾರೆ. ಇಂಥ ಸಿದ್ಧತೆಗಳಿಗೆ ರಂಗಭೂಮಿ ಎಂದಿಗೂ ತಮಗೆ ಜೊತೆಯಾಗಿ ನಿಲ್ಲುವುದಾಗಿ ಹೇಳುತ್ತಾರೆ.

'ನಾನು ಓದಿದ್ದು ಎಂಜಿನಿಯರಿಂಗ್. ನಟನೆ ಬಗ್ಗೆ ಚಿಕ್ಕಂದಿನಿಂದಲೂ ಉತ್ಸಾಹ ತುಂಬಿಕೊಂಡಿತ್ತು. ಚಿಕ್ಕವಯಸ್ಸಿನಲ್ಲಿಯೇ ರಂಗಭೂಮಿ ಒಡನಾಟ ದೊರೆತಿತ್ತು. ನನ್ನ ಅಮ್ಮ ಮಕ್ಕಳ ರಂಗಭೂಮಿ ತಂಡದ ಆಯೋಜಕಿ ಆಗಿದ್ದರು. ಹೀಗಾಗಿ ನಾನು ಆ ಕಡೆ ಹೊರಳಿದ್ದು ಸಹಜವೇ. ಎಂಜಿನಿಯರಿಂಗ್ ಓದುವಾಗಲೂ ನಾಟಕದ ಹವ್ಯಾಸ ಮುಂದುವರೆಸಿದ್ದೆ. ಪ್ರವೃತ್ತಿ, ದೃಶ್ಯ, ರಂಗ ಪ್ರತಿಭಾ ತಂಡಗಳಲ್ಲಿ ಸೇರಿ ನಾಟಕಗಳನ್ನು ಮಾಡಿದೆ. ನಟನೆಯೆಡೆಗೆ ಮನಸ್ಸು ಹೊರಳಲು ವಿಶೇಷ ಕಾರಣವೇನೂ ಬೇಕಿರಲಿಲ್ಲ' ಎಂದು ತಮ್ಮ ಹಿನ್ನೆಲೆ ಬಗ್ಗೆ ಹೇಳುತ್ತಲೇ ನಗುತ್ತಾರೆ ಮಂದಾರ.

ಮೊದಲು 'ನಮ್ದುಕೆ' ಯೂಟ್ಯೂಬ್ ಚಾನಲ್‌ನಲ್ಲಿ ನಟಿಸಲು ಆರಂಭಿಸಿದ ಮಂದಾರ, 'ಓಲ್ಡ್ ಮಾಂಕ್' ಸಿನಿಮಾದಲ್ಲಿ ಮೊದಲ ಬಾರಿಗೆ ಹೀರೊ ತಂಗಿ ಪಾತ್ರ ನಿರ್ವಹಿಸಿದರು. ನಂತರ 'ಪದವಿ ಪೂರ್ವ', 'ಆಚಾರ್ ಅಂಡ್ ಕೋ.' ಸಿನಿಮಾಗಳಲ್ಲಿ ನಟಿಸಿದರು. 'ಹೊಸ ದಿನಚರಿ' ಸಿನಿಮಾದಲ್ಲಿ ಮುಖ್ಯಪಾತ್ರ ಅವರದಾಯಿತು. 'ಬ್ಲಿಂಕ್' ಸಿನಿಮಾ ಮಂದಾರ ಅವರ ಆತ್ಮವಿಶ್ವಾಸವನ್ನು ದುಪ್ಪಟ್ಟು ಮಾಡಿತ್ತು.

'ಒಂದೊಂದು ಸಿನಿಮಾ ಕೂಡ ಉತ್ತಮ ಅನುಭವಗಳನ್ನು ನೀಡುತ್ತಿದೆ. ನಟನೆಯೆಡೆಗಿನ ಆಸಕ್ತಿ, ಗಂಭೀರತೆ, ಉತ್ಸಾಹ ಮೊದಲಿಗಿಂತ ಹೆಚ್ಚಾಗಿದೆ. ಒಳ್ಳೆಯ ಕಂಟೆಂಟ್ ಅವಲಂಬಿತ ಸಿನಿಮಾಗಳಲ್ಲಿ ನಟಿಸಬೇಕು ಎಂಬುದು ನನ್ನಿಷ್ಟ. ಇದುವರೆಗೂ ಮಾಡಿದ್ದು ಕಂಟೆಂಟ್–ಕಮರ್ಷಿಯಲ್ ಎರಡರ ಮಿಶ್ರಣದ ಸಿನಿಮಾಗಳು. ಈಗ ಕಂಟೆಂಟ್ ಸಿನಿಮಾಗಳತ್ತಲೇ ಒಲವು ಹೆಚ್ಚಾಗಿದೆ. ಅಲ್ಲಿ ನಟನೆಗೆ ಅವಕಾಶ ಹೆಚ್ಚಿರುತ್ತದೆ ಎಂಬ ಭಾವನೆ ನನ್ನದು' ಎನ್ನುತ್ತಾರೆ.

ಬಿಡುವಾದಾಗ ಫೋಟೊಗ್ರಫಿಯತ್ತ ಚಿತ್ತ ಹರಿಸುವ ಅವರಿಗೆ ಭರತನಾಟ್ಯ, ಕೂಚುಪುಡಿ ನೃತ್ಯ ಕಲೆಯೂ ಒಲಿದಿದೆ. ನಿರ್ದೇಶನದ ಕನಸನ್ನೂ ಹೊಂದಿರುವ ಅವರು, ಈಚೆಗೆ ಕಿರುಚಿತ್ರವೊಂದನ್ನು ನಿರ್ದೇಶನ ಮಾಡಿದ್ದು, ಮುಂದೊಂದು ದಿನ ಸಿನಿಮಾ ನಿರ್ದೇಶನದತ್ತಲೂ ಮುನ್ನುಗ್ಗುವುದಾಗಿ ಹೇಳುತ್ತಾರೆ. ■